**6**

# ಅಪೊಸ್ತಲರ ಕೃತ್ಯಗಳಲ್ಲಿ ಮಾರ್ಪಡುವಿಕೆಗಳು ಹಾಗೂ ಮಾರ್ಪಡದೇ ಇರುವಂಥವುಗಳು

ಮಾರ್ಪಡುವಿಕೆಯ ಅನೇಕ ಉದಾಹರಣೆಗಳು ಅಪೊಸ್ತಲರ ಕೃತ್ಯಗಳ ಗ್ರಂಥದಲ್ಲಿ ಕೊಡಲ್ಪಟ್ಟಿವೆ. ಪ್ರಥಮ ಶತಮಾನದ ಪ್ರಸಂಗಿಗಳ ಪ್ರಸಂಗಿಸುವಿಕೆಗೂ ಸುವಾರ್ತೆಯನ್ನು ಕೇಳುವ ಅನೇಕರಿಂದ ಸಿದ್ಧವಾದ ಉತ್ತರ ಕೊಡಲ್ಪಟ್ಟದ್ದಕ್ಕೂ ನಮ್ಮ ಹೃದಯಗಳು ಚಕಿತಗೊಳ್ಳುತ್ತವೆ. ರಕ್ಷಣೆಯಲ್ಲಿ ಇತರರು ಹರ್ಷಗೊಳ್ಳುವದನ್ನು ನೋಡುವಾಗ ನಮಗೆ ಆನಂದವಾಗುತ್ತದೆ. ಹೀಗಿದ್ದರೂ ಕೆಲವು ಸಲ, ಅದೇ ಜನರು ಪ್ರಸಂಗಿಸುವದನ್ನೂ ಪರಿಣಾಮಗಳ ಕೊರತೆಯಲ್ಲಿ ನಿರಾಶೆರಾಗಿದ್ದುದನ್ನೂ ಓದುತ್ತೇವೆ. ಅದೇ ಸಮಯದಲ್ಲಿ ಕೇಳುಗರು ಮಾರ್ಪಡದೇ ಹೊರಟುಹೋದರು. ಮಾರ್ಪಟ್ಟವರಿಗೂ ಮಾರ್ಪಡದೇ ಇರುವವರಿಗೂ ಮಧ್ಯದಲ್ಲಿ ಯಾವ ವ್ಯತ್ಯಾಸವಿತ್ತು? ಅದು ಈ ಸಮಯದಲ್ಲಿ ನಮ್ಮ ಅಧ್ಯಯನವಾಗಿರುವುದು.

## ಮಾರ್ಪಡುವಿಕೆಯ ಮೂಲ ಸೂತ್ರಗಳು

ಮಾರ್ಪಡುವಿಕೆಯ, ರಕ್ಷಣೆಯ ಯೋಜನೆಯ ಬಗ್ಗೆ ಹೊಸ ಒಡಂಬಡಿಕೆಯ ಸರಳ ಬೋಧನೆಯನ್ನು ನಾವು ಅರ್ಥ ಮಾಡಿಕೊಳ್ಳತಕ್ಕದ್ದು. ಈ ಯೋಜನೆಗೆ ಅನೇಕ ಮೂಲ ಸೂತ್ರಗಳಿವೆ ಮತ್ತು ಈ ಮೂಲ ಸೂತ್ರಗಳು ದೇವರಿಗೆ ಮನುಷ್ಯರನ್ನು ಹಿಂದಿರುಗಿ ಬಂಧಿಸುವ ಸರಪಣಿಯನ್ನು ರೂಪಿಸಲು ಸಂಕೋಲೆಯಂತೆ ಒಂದುಗೂಡಿಸುತ್ತವೆ. ನಮ್ಮನ್ನು ರಕ್ಷಿಸುವವೆಂದು ಹೇಳಲ್ಪಟ್ಟ ಸಂಗತಿಗಳನ್ನು ಈ ಪಾಠದಲ್ಲಿ ನಾವು ಗಮನಿಸೋಣ, ಅವು ಮೂರು ಶೀರ್ಷಿಕೆಗಳ ಕೆಳಗೆ ಬರುತ್ತವೆ.

### ಪರಲೋಕದ ಭಾಗ

1. ದೇವರು (2 ತಿಮೊಥೆ 1:8, 9). ದೇವರು ರಕ್ಷಣೆಯ ಮೂಲ ಯೋಜಕನೂ ರೂಪಿಸಿದವನೂ ಆಗಿದ್ದುದರಿಂದ ಆತನು ರಕ್ಷಿಸುವವನು ಎಂದು ಹೇಳಲ್ಪಟ್ಟಿದೆ. ಆತನು ಎಲ್ಲಾ ಆಶೀರ್ವಾದಗಳ ಮೂಲವಾಗಿದ್ದಾನೆ. ಆತನು ನೀಲಿನಕ್ಷೆಗಳನ್ನು ಬರೆದನು; ಆತನು ನಮ್ಮ ರಕ್ಷಣೆಯನ್ನು ಸಂಕಲ್ಪಿಸಿದನು.

2. ಕೃಪೆ (ಎಫೆಸ 2:5). ರಕ್ಷಣೆಯನ್ನು ಒದಗಿಸುವ ಹಂಗು ದೇವರಿಗಿರಲಿಲ್ಲ.

ಅರ್ಹತೆಯಿಲ್ಲದವರಿಗೆ ಆತನು ಒದಗಿಸಿದ ದಯೆ. ಇದು "ಕೃಪೆಯ" ಅರ್ಥವಾಗಿದೆ. ರಕ್ಷಿಸಲ್ಪಡಲು ನಾವು ಅರ್ಹರಾಗಿರುವದಿಲ್ಲ.

3. ಕ್ರಿಸ್ತನು (ಮತ್ತಾಯ 1:21). ದೇವರ ಕೃಪೆಯು ಆತನು ತನ್ನ ಕುಮಾರನನ್ನು ಕೊಡುವದರಲ್ಲಿ ಆದರ್ಶವಾಗಿ ತೋರಿಸಲ್ಪಟ್ಟಿದೆ (ಯೋಹಾನ 3:16). ಯೇಸು ಕ್ರಿಸ್ತನು ನಮ್ಮ ರಕ್ಷಕನಾಗಿದ್ದಾನೆ.

4. ಕ್ರಿಸ್ತನ ರಕ್ತ (ಮತ್ತಾಯ 26:28). ಕಲ್ವಾರಿಯ ಕ್ರೂಜೆಯ ಮೇಲೆ ಸುರಿಸಿದ ಯೇಸುವಿನ ರಕ್ತವು ಪಾಪಕ್ಕೆ ಪರಿಹಾರವಾಗಿರುವುದು. ರಕ್ತಧಾರೆಯಿಲ್ಲದೇ ಕ್ಷಮಾಪಣೆಯಿರುವದಿಲ್ಲ (ಇಬ್ರಿಯ 9:22).

5. ಪರಿಶುದ್ಧಾತ್ಮ (1 ಕೊರಿಂಥ 6:11). ಕ್ರಿಸ್ತನು ಹೊರಟು ಹೋದನಂತರ ಪರಿಶುದ್ಧಾತ್ಮನು ಲೋಕದೊಳಗೆ ಕಳುಹಿಸಲ್ಪಟ್ಟನು. ಆತನ ಪಾತ್ರವು ರಕ್ಷಣೆಯ ಯೋಜನೆ ಯನ್ನು ಮನುಷ್ಯರಿಗೆ ಪ್ರಕಟಿಸುವದಾಗಿತ್ತು. ಆತನು ಕೊಟ್ಟಂತೆ ಮಾತಾಡಲು ಆತನು ಕೆಲವು ಜನರನ್ನು ಪ್ರೇರೆಪಿಸಿದನು (ಅಪೊಸ್ತಲರ ಕೃತ್ಯ 2:4). ಆತ್ಮನಿಂದ ವಾಕ್ಯವು ಮನುಷ್ಯನಿಗ ಕೊಡಲ್ಪಟ್ಟಿತು.

6. ದೇವರ ವಾಕ್ಯ ಇಲ್ಲವೇ ಸುವಾರ್ತೆ (ರೋಮಾಪುರ 1:16). ಸವಾರ್ತಾ ಸಂದೇಶದಲ್ಲಿ ದೇವರ ಬಲವು ರಕ್ಷಣೆಗಾಗಿರುವುದು. ಆ ಸಂದೇಶವನ್ನು ನಂಬುವ ಪ್ರತಿಯೊಬ್ಬರಿಗೂ ರಕ್ಷಿಸಲ್ಪಡುವ ಅವಕಾಶವಿರುವದು.

ಇಲ್ಲಿಯವರಗೆ ಹೇಳಲ್ಪಟ್ಟ ಎಲ್ಲಾ ಸೂತ್ರಗಳು ಮನುಷ್ಯನ ಕಡೆಗೆ ಕೊಡಲ್ಪಟ್ಟ ಪರಲೋಕದ ಭಾಗವಾಗಿವೆ. ಇವುಗಳಲ್ಲಿ ಪ್ರತಿಯೊಂದೂ ಸರಪಣಿಯಲ್ಲಿಯ ಸಂಕೋಲೆಯಂತೆ ಅಗತ್ಯವಾದದ್ದಾಗಿದೆ. ಒಂದು ವಾಕ್ಯವು ರಕ್ಷಣೆಯ ಯೋಜನೆಯ ಒಂದು ಸಂಗತಿಯ ಮೇಲೆ ಮುಂತಿಳಿಸಿದಂತೆ ಹಾಗೂ ಇತರ ವಾಕ್ಯಗಳು ಅದನ್ನು ಇತರ ಸಂಗತಿಗಳ ಮೇಲೆ ಅವಲಂಭಿಸಿರುವದೆಂದು ನಮೂದಿಸಿದಾಗ ಅವು ಒಂದಕ್ಕೊಂದು ವಿರುದ್ಧವಾದವುಗಳಾಗಿರುವವೆಂದು ಯಾರೂ ಯೋಚಿಸಬಾರದು.

**ಮಾನವ ಸಹಾಯ**

ರಕ್ಷಣೆಯ ಯೋಜನೆಯ ಎರಡನೆಯ ಭಾಗವನ್ನು ನಾವು ಅಧ್ಯಯನ ಮಾಡುವಾಗ ಮಾನವನಿಗೆ ಸಂಬಂಧಪಟ್ಟ ಕೆಲವು ನಿಯಮಗಳನ್ನು ಕಂಡು ಕೊಳ್ಳುತ್ತೇವೆ. 2 ಕೊರಿಂಥ 4:7ರ ಪ್ರಕಾರ ಸುವಾರ್ತೆಯು ಕೇಳುಗರಿಗೆ ಮಣ್ಣಿನ ಘಟಕಗಳಲ್ಲಿ ಒಯ್ಯಲ್ಪಡುತ್ತದೆ (ನೋಡಿರಿ ರೋಮಾಪುರ 11:4; 1 ಕೊರಿಂಥ 9:22). ಸುವಾರ್ತೆಯು ಸವಾರ್ತೆ ಪ್ರಸಂಗದಿಂದಲೂ ಬೋಧನೆಯಿಂದಲೂ ತರಲ್ಪಟ್ಟಿತು. "ಯಾಕಂದರೆ ದೇವರ ಜ್ಞಾನಾನುಸಾರವಾಗಿ ಲೋಕವು ತನ್ನ ಜ್ಞಾನದ ಮೂಲಕ ದೇವರನ್ನು ತಿಳದುಕೊಳ್ಳಲಿಲ್ಲವಾದದರಿಂದ, ಸುವಾರ್ತೆ ಪ್ರಕಟಣೆಯೆಂಬ ಹುಚ್ಚುತನದಿಂದಲೇ ನಂಬುವರನ್ನು ರಕ್ಷಿಸುವುದು ದೇವರಿಗೆ ಇಷ್ಟವಾಗಿತ್ತು" ಎಂದು 1 ಕೊರಿಂಥ 1:21 ಹೇಳುತ್ತದೆ.

**ಪಾಪಿಯ ಭಾಗ**

ಒಂದು ಅರ್ಥದಲ್ಲಿ ಪಾಪಿಯು ತನ್ನನ್ನು ರಕ್ಷಿಸಿಕೊಳ್ಳುತ್ತಾನೆ (ಅಪೊಸ್ತಲರ ಕೃತ್ಯ 2:40). ಹೇಗೆ? ಅವನು ಕೇಳುವಾಗ ನಂಬುವದರಿಂದ (ಮಾರ್ಕ 16:16; ರೋಮಾಪುರ 10:17), ಮಾನಸಾಂತರ ಪಡುವದರಿಂದ (ಅಪೊಸ್ತಲರ ಕೃತ್ಯ 17:30, 31; 2 ಕೊರಿಂಥ 7:10), ಕ್ರಿಸ್ತನಲ್ಲಿ ತನ್ನ ವಿಶ್ವಾಸವನ್ನು ಅರಿಕೆ ಮಾಡುವದರಿಂದ (ರೋಮಾಪುರ 10:10),

ಮತ್ತು ಬಾಪ್ತಿಸ್ಮ ಹೊಂದುವದರಿಂದ (1 ಪೇತ್ರ 3:21).

ಜನರು "ತಮ್ಮನ್ನು ತಾವೇ ರಕ್ಷಿಸಿಕೊಳ್ಳುವದರಿಂದ" ಮತ್ತು ಮನುಷ್ಯನಿಂದ ಆಚರಿಸಲ್ಪಡುವ ಸಂಗತಿಗಳು ರಕ್ಷಿಸುವದರಿಂದ ದೇವರು ಆಜ್ಞಾಪಿಸಿದ್ದನ್ನು ಮಾಡುವದರಿಂದ ಜನರು ತಮ್ಮನ್ನು ತಾವೇ ರಕ್ಷಿಸಿಕೊಳ್ಳುವರು ಎಂಬುದು ಹಿಂಬಾಲಿಸುತ್ತದೆ. ಯೇಸುವು ನಮ್ಮ ರಕ್ಷಕನು ಎಂದು ನಾವು ಅರ್ಥ ಮಾಡಿಕೊಳ್ಳುತ್ತೇವೆ. ರಕ್ಷಣೆಯ ಯೋಜನೆಯಲ್ಲಿ ಈ ಹೆಜ್ಜೆಗಳು ಯೇಸುವು ರಕ್ಷಿಸುವ ಮೊದಲು ಕೈಕೊಳ್ಳಬೇಕಾದ ಶರತ್ತುಗಳ ಅರ್ಥದಲ್ಲಿ ಮಾತ್ರ ರಕ್ಷಿಸುತ್ತವೆ.

## ಮಾರ್ಪಾಡುವಿಕೆಯಲ್ಲಿ ಮತ್ತು ಮಾರ್ಪಾಡದಿರುವಿಕೆಯಲ್ಲಿ ಭಿನ್ನತೆ

ಅಪೊಸ್ತಲರ ಕೃತ್ಯಗಳ ಗ್ರಂಥದಲ್ಲಿ ಸುವಾರ್ತೆಯು ಸಾರಲ್ಪಟ್ಟಾಗ ಮಾರ್ಪಾಟು ಹೊಂದಿದ ಹಾಗೂ ಮಾರ್ಪಾಟು ಹೊಂದದೇ ಇರುವವರ ಮಧ್ಯದಲ್ಲಿ ಇದ್ದ ಭಿನ್ನತೆಯು ಯಾವುದಾಗಿತ್ತು?

ಅಪೊಸ್ತಲರ ಕೃತ್ಯ 8ರಲ್ಲಿ ಐಥಿಯೋಪ್ಯದ ಕಂಚುಕಿಯ ವಿಷಯವನ್ನು ಜಾಗರೂಕತೆಯಿಂದ ಗಮನಿಸೋಣ. ದೇವರು ಅವನಿಗಾಗಿ ಏನು ಮಾಡಿದನು? ಅವನು ರಕ್ಷಿಸಲ್ಪಡಬೇಕೆಂದು ಆತನು ಬಯಸಿದನೋ? ನಿಶ್ಚಯವಾಗಿಯೂ ಹೌದು. ಕ್ರಿಸ್ತನು ಅವನಿಗಾಗಿ ಮರಣ ಹೊಂದಿದನೋ? ಹೌದು. ಪರಿಶುದ್ಧಾತ್ಮನು ಅವನಿಗಾಗಿ ಏನನ್ನಾದರೂ ಮಾಡಿದನೋ? ಹೌದು. ಕಥೆಯನ್ನು ಹೇಳುವಂತೆ ಆತನು ಒಬ್ಬ ಪ್ರಸಂಗಿಯನ್ನು ಪ್ರೇರೇಪಿಸಿದನು. ಸುವಾರ್ತೆಯು ಈ ಮನುಷ್ಯನಿಗಾಗಿ ಇತ್ತು.

ಈಗ, ಅಪೊಸ್ತಲರ ಕೃತ್ಯ 24ರಲ್ಲಿ ಫೇಲಿಕ್ಸನ ವಿಷಯವನ್ನು ನೋಡೋಣ. ಅವನು ಮಾರ್ಪಾಟಾಗಲಿಲ್ಲ. ಅವನ ಬಗ್ಗೆ ನಮ್ಮ ಪ್ರಶ್ನೆಗಳನ್ನು ಕೇಳೋಣ. ದೇವರು ಅವನಿಗಾಗಿ ಏನನ್ನು ಮಾಡಿದನು? ದೇವರು ಅವನನ್ನು ಪ್ರೀತಿಸಿದನೋ? ಯೇಸುವು ಅವನಿಗಾಗಿ ಮರಣ ಹೊಂದಿದನೋ? ನಿಶ್ಚಿತವಾಗಿ. ದೇವರು ಅವನಿಗೆ ಪ್ರೇರೇಪಿತ ಸಂದೇಶವನ್ನು ಕೊಟ್ಟನೋ? ನಿಶ್ಚಯವಾಗಿಯೂ ಕೊಟ್ಟನು. ಐಥಿಯೋಪ್ಯದವನಿಗೆ ಮಾಡಿದ ಪ್ರತಿಯೊಂದನ್ನೂ ದೇವರು ಫೇಲಿಕ್ಸನಿಗಾಗಿ ಮಾಡಿದನು. ದೇವರು ಒಬ್ಬನಿಗೆ ಅವಕಾಶಗಳನ್ನು ಒದಗಿಸಿಕೊಟ್ಟನು ಹಾಗೂ ಇನ್ನೊಬ್ಬನಿಗೆ ಅವಕಾಶ ಒದಗಿಸಲಿಲ್ಲ ಎಂಬುದು ಇಬ್ಬರಲ್ಲಿಯ ಭಿನ್ನತೆಯಿಲ್ಲ. ಪ್ರತಿಯೊಬ್ಬನಿಗೂ ಆತನು ಅದನ್ನೇ ಮಾಡಿದನು.

ಹೀಗಿದ್ದರೂ, ಒಬ್ಬನು ರಕ್ಷಣೆಯನ್ನು ಸ್ವೀಕರಿಸಲಿಕ್ಕಾಯಿತು ಮತ್ತು ಇನ್ನೊಬ್ಬನು ಸ್ವೀಕರಿಸಲಿಕ್ಕಾಗಲಿಲ್ಲ ಎಂಬುದೂ ಭಿನ್ನತೆಯಾಗಿರುವದಿಲ್ಲ. ದೇವರು ತನ್ನ ಬಳಿಗೆ ಬರಲು ಪ್ರತಿಯೊಬ್ಬನನ್ನು ಆಹ್ವಾನಿಸುತ್ತಾನೆ. ಪಾಪಿಗಳಿಗೆ ಸುವಾರ್ತೆಯನ್ನು ಸ್ವೀಕರಿಸಲು ಸಾಮರ್ಥ್ಯವಿಲ್ಲದಿದ್ದರೆ ಸುವಾರ್ತೆಯ ಆಮಂತ್ರಣವು ಹಾಸ್ಯಾಸ್ಪದವಾದದ್ದಾಗುತ್ತದೆ.

ಮಾನವ ಸಾಧನದಲ್ಲಿ ಭಿನ್ನತೆಯಿತ್ತೋ? ಫಿಲಿಪ್ಪನು ಐಥಿಯೋಪ್ಯದ ಕಂಚುಕಿಗೆ ಪ್ರಸಂಗಿಸಿದನೆಂದು ನಾವು ಗಮನಿಸುತ್ತೇವೆ. ಹಾಗೆಯೇ ಫೇಲಿಕ್ಸನಿಗೆ ಪೌಲನೂ ಪ್ರಸಂಗಿಸಿದನು. ಇದೂ ಸಹ ಭಿನ್ನತೆಯಾಗಿರುವದಿಲ್ಲ.

ಹಾಗಾದರೆ, ಭಿನ್ನತೆಯು ಯಾವುದು? ಒಂದೇ ಭಿನ್ನತೆಯು ಪಾಪಿಗಳಿಂದ ಪ್ರತ್ಯುತ್ತರವು, ಒಬ್ಬನು ವಿಧೇಯನಾದನು ಮತ್ತೊಬ್ಬನು ವಿಧೇಯನಾಗಲಿಲ್ಲ. ಒಬ್ಬನಿಗೆ ಮಾನಸಾಂತರಪಡಲು ಹಾಗೂ ತನ್ನ ವಿಶ್ವಾಸವನ್ನು ಅರಿಕೆ ಮಾಡಲು ಧೈರ್ಯವಿತ್ತು, ಇನ್ನೊಬ್ಬನಿಗೆ ಇರಲಿಲ್ಲ. ಒಬ್ಬನು ನೀರಿನೊಳಗೆ ಹೋಗಿ ಬಾಪ್ತಿಸ್ಮ ಹೊಂದಲು ಮನಸ್ಸುಳ್ಳವನಾಗಿದ್ದನು. ಇನ್ನೊಬ್ಬನು ಮನಸ್ಸುಳ್ಳವನಾಗಿರಲಿಲ್ಲ.

## ಮುಕ್ತಾಯ

ನೀವು ಈಗ ರಕ್ಷಿಸಲ್ಪಟ್ಟಿರದಿದ್ದರೆ, ಅದಕ್ಕೆ ಕಾರಣ ನಮ್ಮಲ್ಲಿ ಯಾರೊಬ್ಬರಿಗಾದರೂ ದೇವರು ಮಾಡಿದಷ್ಟನ್ನು ನಿಮಗೆ ದೇವರು ಮಾಡಿರುವದಿಲ್ಲ ಎಂಬುದು ಅಲ್ಲ. ರಕ್ಷಿಸಲ್ಪಡಲು ನೀವು ಅಶಕ್ತರಾಗಿರುವಿರಿ ಎಂಬುದೂ ಅಲ್ಲ. ರಕ್ಷಣೆಯ ಸಂದೇಶವನ್ನು ನಿಮಗೆ ತರಲು ಇತರರು ಅಲ್ಲಗಳೆದಿರುವರು ಎಂಬುದೂ ಅಲ್ಲ. ಒಂದೇ ಒಂದು ಕಾರಣ, ನೀವು ಮನಸ್ಸು ಮಾಡದೇ ಇರುವಂಥದ್ದು (ನೋಡಿರಿ ಮತ್ತಾಯ 23:37).

© 2009 Truth for Today